# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 337 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಪ್ರತಾಪ ಸಿಂಹ ನಾಯಕ್ ಕೆ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 18.07.2024 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಳುನಾಡಿನ ಪ್ರಸಿದ್ಧ ಜಾನಪದ ಕ್ರೀಡೆ "ಕಂಬಳ"ದ ಸಂಘಟಕರಿಗೆ ಪೂರ್ಣ ಅನುದಾನವನ್ನು ಇದುವರೆಗೆ ಬಿಡುಗಡೆ ಮಾಡದಿರುವುದರಿಂದ ಅನುದಾನದ ನಿರೀಕ್ಷೆಯಲ್ಲಿರುವ ಸಂಘಟಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, 2023-24ನೇ ಆರ್ಥಿಕ ವರ್ಷದಲ್ಲಿ " ಕಂಬಳ"ದ ಸಂಘಟಕರಿಗೆ ಎಷ್ಟು ಮೊತ್ತದ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ; | 2023-24ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪುತ್ತೂರು ಮತ್ತು ಉಪ್ಪಿನಂಗಡಿಯಲ್ಲಿ ನಡೆಯುವ "ಪುತ್ತೂರು ಕೋಟಿ-ಚನ್ನಯ ಜೋಡುಕೆರೆ ಕಂಬಳ"ಕ್ಕೆ ರೂ.5.00 ಲಕ್ಷಗಳನ್ನು ಹಾಗೂ "ಉಪ್ಪಿನಂಗಡಿ ವಿಜಯ-ವಿಕ್ರಮ ಜೋಡುಕೆರೆ ಕಂಬಳ" ಕ್ಕೆ ರೂ.10.00 ಲಕ್ಷಗಳ ಪ್ರಾಯೋಜಕತ್ವವನ್ನು ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/58/ಟಿಡಿಓ/2024, ದಿನಾಂಕ:15-03-2024ರಲ್ಲಿ ಮಂಜೂರು ಮಾಡಿ ಆದೇಶ ಹೊರಡಿಸಿದೆ. |
| ಇ) | "ಕಂಬಳ"ದ ಸಂಘಟಕರಿಗೆ ಪೂರ್ಣ ಅನುದಾನವನ್ನು ಇದುವರೆಗೂ ಒದಗಿಸದಿರಲು ಕಾರಣಗಳೇನು; | |
| ಈ) | ಯಾವ ಕಾಲಮಿತಿಯೊಳಗೆ "ಕಂಬಳ"ದ ಸಂಘಟಕರಿಗೆ ಸರ್ಕಾರ ಪೂರ್ಣ ಹಾಗೂ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸುವುದು? | ಪ್ರಸ್ತಾಪಿತ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಅನುದಾನ ಸೆಳೆಯಲು ನಿಯಮಾನುಸಾರ ಬಿಲ್ಲುಗಳನ್ನು ತಯಾರಿಸಿ ದಿನಾಂಕ: 23-03-2024ರಂದು ಜಿಲ್ಲಾ ಖಜಾನೆಗೆ ಸಲ್ಲಿಸಿರುತ್ತಾರೆ. ಆದರೆ, ಖಜಾನೆಯಲ್ಲಿ ಬಿಲ್ಲುಗಳ ಸ್ವೀಕೃತಿಯ ಕೊನೆಯ ದಿನಾಂಕ: 20-03-2024 ಆಗಿದ್ದರಿಂದ, ಜಿಲ್ಲಾ ಖಜಾನೆಯ ತಂತ್ರಾಂಶದಲ್ಲಿ ಬಿಲ್ಲುಗಳು ಸ್ವೀಕೃತವಾಗಿರುವುದಿಲ್ಲ. ಹೀಗಾಗಿ, ಪ್ರವಾಸೋದ್ಯಮ ಇಲಾಖೆಯಿಂದ ಬಿಡುಗಡೆ ಮಾಡಿರುವ ಮೇಲ್ಕಂಡ ಅನುದಾನವನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ.<br><br>ಆದ್ದರಿಂದ, ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/58/ಟಿಡಿಓ/2024, ದಿನಾಂಕ:15-03-2024 ರಲ್ಲಿ ಮಂಜೂರಾತಿ ನೀಡಿರುವ ಕಂಬಳ ಉತ್ಸವದ ಅನುದಾನ ರೂ.15.00 ಲಕ್ಷಗಳನ್ನು 2024-25ನೇ ಸಾಲಿನಲ್ಲಿ ಮರು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. |

**TOR 164 TDV 2024**

**(ಎಚ್.ಕೆ.ಪಾಟೀಲ್)**
ಕಾನೂನು, ನ್ಯಾಯ, ಮಾನವ ಹಕ್ಕುಗಳು
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು